**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ. ಎಂ.ಎಫ್. ಸಿ, ಕನಕಪುರ**
**C.C917 /2020**

**PW1**

<u>**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ದಿನಾಂಕ 13.11.2025.**</u>

<u>**ಪಾಟೀ ಸವಾಲು: 1 ನೇ ಆರೋಪಿ ಪರ ಶ್ರೀ. A.R.K. ವಕೀಲರಿಂದಃ**</u>

ಆರೋಪಿಗಳಿಗೂ ಮತ್ತು ನಿಮ್ಮ ನಡುವೆ ಹಣಕಾಸಿನ ವ್ಯವಹಾರದಲ್ಲಿ ವ್ಯಾಜ್ಯ ಇತ್ತು ಎಂದರೆ ಸರಿ . ನೀವು ಮತ್ತು ಆರೋಪಿಗಳು ಅನ್ಯೂನ್ಯವಾಗಿ ಇರಲಿಲ್ಲ ಎಂದರೆ ಸರಿ . ದಿನಾಂಕ 20.01.2020 ರಂದು ಗಲಾಟೆ ಆಗಿರುತ್ತದೆ. ಯಾವ ವಾರದಂದು ಆಗಿರುತ್ತದೆ ಎಂದು ನೆನಪಿಲ್ಲ. ಗಲಾಟೆ ರಾತ್ರಿ 8.00 ಗಂಟೆಯಲ್ಲಿ ಆಗಿರುತ್ತ ದೆ ಎಂದರೆ ಸರಿ . ಗಲಾಟೆಯ ಸಮಯದಲ್ಲಿ ಅಕ್ಕ ಪಕ್ಕದ ಮನೆಯವರು ಇದ್ದರು ಎಂದರೆ ಸರಿ . ಗಲಾಟೆ ಆದಾಗ ನೀವೆಲ್ಲಿದ್ದಿರಿ ಎಂದರೆ ಸಾಕ್ಷಿದಾರರ ಕೆಲಸಕ್ಕೆ ಹೋಗಿದ್ದೆನು ಎಂದು ನುಡಿಯುತ್ತಾರೆ. ಗಲಾಟೆ ಆದ ಸಮಯದಲ್ಲಿ 5 ಜನ ಇದ್ದರು. ಆರೋಪಿಗಳೆಲ್ಲರೂ ಸೇರಿ ನನ್ನ ತಂದೆಯನ್ನು ಕಾಲಿನಿಂದ ಒದ್ದಿರುತ್ತಾರೆ. ನಾನು ಗಲಾಟೆ ಆಗುವ ಸಮಯಕ್ಕೆ ಬಂದಿರುತ್ತೇನೆ. ಗಲಾಟೆ ಸುಮಾರು ಅರ್ಧ ಗಂಟೆ ನಡೆಯಿತು.

1 ನೇ ಆರೋಪಿ ದೊಣ್ಣೆಯಿಂದ ನಿಮ್ಮ ತಂದೆಗೆ ಹೊಡೆದಿರುತ್ತಾರೆ ಎಂದು ಹೇಳಿರುತ್ತೀರಿ , ಯಾವ ಜಾತಿಯ ದೊಣ್ಣೆಯಿಂದ ಎಂದರೆ ಸಾಕ್ಷಿದಾರರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದೊಣ್ಣೆ 3 ರಿದ 4 ಅಡಿ ಇತ್ತು. ನ್ಯಾಯಾಲಯದ

ಮುಂದಿರುವ ಮು.ಮಾ. ದೊಣ್ಣೆಯಿಂದಲೇ ಆರೋಪಿಗಳು ಹೊಡೆದಿದ್ದರು ಎನ್ನುವ ಸಂಬಂಧ ಯಾವುದೇ ಗುರುತನ್ನು ನಾನು ಇಟುಟಕೊಂಡಿರುವುದಿಲ್ಲ. ಸಾಮಾನ್ಯವಾಗಿ ನ್ಯಾಯಾಲಯದ ಮುಂದಿರುವ ಮು.ಮಾ. ಗಳು ಊರಿನ ಎಲ್ಲಾ ಮನೆಗಳಲ್ಲಿ ಸಿಗುತ್ತದೆ ಎಂದರೆ ಸರಿ .

1 ನೇ ಆರೋಪಿ ಎಡಗೈಯಿಂದ ನನಗೆ ಹೊಡೆದಾಗ ರಕ್ತ ಬಂದಿರುವುದಿಲ್ಲ. ನೀವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿ . ಪೋಲಿಸ್ ಠಾಣೆಯಲ್ಲಿ ದೂರನ್ನು ನೀವೇ ನೀಡಿರುತ್ತೀರಿ ಎಂದರೆ ಸರಿ . ದೂರನ್ನು ಯಾರು ಬರೆದರು ಎಂದರೆ ಪೋಲಿಸ್ ನವರೇ ಬರೆದಿರುವುದಾಗಿ ನುಡಿಯುತ್ತಾರೆ. ಯಾವ ಪೋಲಿಸ್ ದೂರು ಬರೆದಿರುತ್ತಾರೆ ಎಂದು ಹೇಳಲು ಬರುವುದಿಲ್ಲ.

ಗಲಾಟೆ ಆದ ಮೇಲೆ ನಾನು ಮೊದಲು ಆಸ್ಪತ್ರೆಗೆ ಹೋಗಿರುತ್ತೇನೆ. ಸಮಯ ರಾತ್ರಿ 9.00 ಗಂಟೆ ಆಗಿರುತ್ತದೆ. ನೀವು ನಾರಾಯಣ ಪುರದ ವಾಸಿ ಎಂದರೆ ಸರಿ . ಆಸ್ಪತ್ರೆಗೂ , ನಮ್ಮ ಊರಿಗೂ 7 ಕಿಮೀ ಅಂತರವಿದೆ. ದೂರು ನೀಡಿದಾಗ ಮಧ್ಯಾಹ್ನ 12.00 ಗಂಟೆ ಯಾಗಿತ್ತು. ಘಟನೆ ನಡೆದ ದಿನವೇ ನೀವು ದೂರು ನೀಡಿಲ್ಲ ಎಂದರೆ ಸರಿ . ಆಸ್ಪತ್ರೆಯ ಬಳಿ ಪೋಲಿಸ್ ಠಾಣೆ ಇದೆ ಎಂದರೆ ಸರಿ . ನಿಮಗೆ ತಕ್ಷಣ ಪೋಲಿಸ್ ಠಾಣೆಯಲ್ಲಿ ದೂರು ನೀಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿದಾರರು ಅಸ್ಪತ್ರೆಗೆ ಸೇರಿದ್ದೆ ಎಂದು ನುಡಿಯುತ್ತಾರೆ. ನಾನು ಒಳರೋಗಿಯಾಗಿ ಆಸ್ಪತ್ರೆಗೆ ಸೇರಿದ್ದೆ . ಆ ಸಂಬಂಧ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ . ನೀವು ಒಳರೋಗಿಯಾಗಿ ಆಸ್ಪತ್ರೆಯಲ್ಲಿ ಸೇರಿರುವುದಿಲ್ಲ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನನಗೆ ದೇಹದ ಎಡಗೈ ಮತ್ತು ಬಲಗಾಲಿಗೆ ಏಟಾಗಿತ್ತು. ಚಾಸಾ-3 ರವರು ನನ್ನ ತಂದೆಯ ಸ್ನೇಹಿತ, ಅವರಿಗೂ ಸಹ ಕಾಲಿಗೆ ಏಟಾಗಿರುತ್ತದೆ. ಗುಂಪು ಇದ್ದ ಕಾರಣ ಯಾರು ಎಲ್ಲಿಗೆ ಹೊಡೆದರು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ . ಪೋಲಿಸ್ ನವರು ನಿಮ್ಮ ಬಳಿ ಹೇಳಲು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ಪೋಲಿಸ್ ಹೇಳಿಕೆ ಪಡೆದಿದ್ದರು ಎಂದು ಹೇಳಲು ಬರುವುದಿಲ್ಲ. 5 ನೇ ತಿಂಗಳಲ್ಲಿ ಪೊಲಿಸರು ಹೇಳಿಕೆ ಪಡೆದಿದ್ದರು. ಪೋಲಿಸ್ ನವರು ಯಾವುದೇ ಹೇಳಿಕೆ ಪಡೆದಿರುವುದಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಪೊಲಿಸ್ ನವರು ನಿಮ್ಮ ಅನುಕೂಲಕ್ಕೆ ತಕ್ಕಂತೆ ಬರೆದಿದ್ದಾರೆ ಎಂದರೆ ಸರಿಯಲ್ಲ.

ದೊಣ್ಣೆಗಳನ್ನು ಪೊಲಿಸರಿಗೆ ನೀವೇ ಕೊಟ್ಟಿರುತ್ತೀರಿ ಎಂದರೆ ಸರಿ . ದೂರನ್ನು ನೀಡುವಾಗಲೇ ಪೋಲಿಸರಿಗೆ ದೊಣ್ಣೆಗಳನ್ನು ಕೊಟ್ಟಿರುತ್ತೇನೆ. ದೊಣ್ಣೆ ಪಡೆದಿರುವ ಬಗ್ಗೆ ನಿಮಗೆ ಯಾವುದೇ ಹಿಂಬರಹವನ್ನು ಪೋಲಿಸರು ಕೊಟ್ಟಿರುವುದಿಲ್ಲ ಎಂದರೆ ಸರಿ . 1 ನೇ ಆರೋಪಿ ಘಟನೆ ಸ್ಥಳಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಿಲ್ಲ.

ದಿನಾಂಕ 20.01.2020 ರಂದು ಯಾವುದೇ ಗಲಾಟೆ ಆಗಿರುವುದಿಲ್ಲ , ಅರೋಪಿ 1 ರವರು ಸ್ಥಳಕ್ಕೆ ಬಂದಿರುವುದಿಲ್ಲ , ನಿಮಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮದು ಶೀಟ್ ನ ಮನೆ ಎಂದರೆ ಸರಿ . ನೀವು ಹಸುಗಳನ್ನು ಸಾಕಿರುತ್ತೀರಿ ಎಂದರೆ ಸರಿ . ಹಸು ಕಟ್ಟುವಾಗ ಹಸು ರೊಚ್ಚಿ ಗೆದ್ದು ನೀವು ಚಪ್ಪಡಿ ಕಲ್ಲಿನ ಮೇಲೆ ಬಿದ್ದು ಏಟು ಮಾಡಿಕೊಂಡಿರುತ್ತೀರಿ ಎಂದರೆ

ಸರಿಯಲ್ಲ. ಹಣಕಾಸಿನ ವಿಚಾರವಾಗಿ ಹಳೆಯ ದ್ವೇಷದಿಂದಆರೋಪಿ 1 ರವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಗಲಾಟೆ ನಡೆಯುವಾಗ ಅಕ್ಕ ಪಕ್ಕದ ಮನೆಯವರು ಬಿಡಿಸಲು ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಯಾವುದೇ ಗಲಾಟೆ ನಡೆದಿಲ್ಲ , ನಿಮಗೆ ಯಾರೂ ಹೊಡೆದಿರುವುದಿಲ್ಲ , ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು: 2 ರಿಂದ 4 ನೇ ಆರೋಪಿ ಪರ ಶ್ರೀ. S.K.R. ವಕೀಲರಿಂದಃ**

ಕೃಷ್ಣಪ್ಪ ನನ್ನ ತಂದೆ. ನೀವು , ನಿಮ್ಮ ತಂದೆ ಹಾಗೂ ನಿಮ್ಮ ತಂಗಿ ಒಂದೇ ಮನೆಯಲ್ಲಿ ವಾಸವಾಗಿದ್ದೀರಿ ಎಂದರೆ ಸರಿ . ಆರೋಪಿ 2 ರಿಂದ 4 ರವರು ಸಹ ನಿಮ್ಮ ಮೇಲೆ ದೂರನ್ನು ನೀಡಿದ್ದರು ಎಂದರೆ ಸರಿ . ಸದರಿ ಪ್ರಕರಣ ಸಹ ಇದೇ ನ್ಯಾಯಾಲದಲ್ಲಿ ನಡೆಯುತ್ತಿದೆ ಎಂದರೆ ಸರಿ . ನೀವು , 2 ನೇ ಆರೋಪಿ ಗೆ ರೀಪ್ ನಲ್ಲಿ ಹೊಡೆದು ತಲೆಗೆ ಗಾಯಪಡಿಸಿರುತ್ತೀರಿ ಎಂದು ಅವರು ನಿಮ್ಮ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನೀವೇ ಆರೋಪಿಗೆ ರೀಪ್ ನಲ್ಲಿ ಹೊಡೆದು ಗಾಯಪಡಿಸಿ ಬಳಿಕ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

ನಿಮ್ಮ ತಂದೆ ಘಟನೆ ದಿನ ಮನೆಯ ಮುಂದೆ ನಿಂತಿದ್ದಾಗ ನೀವು ಎಲ್ಲಿದ್ದಿಃರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ಕೆಲಸದಿಂದ ಬರುತ್ತಿದೆ ಎಂದು ನುಡಿಯುತ್ತಾರೆ. ನಾನು ಡ್ರೈವಿಂಗ್ ಕೆಲಸಕ್ಕೆ ಹೋಗಿ ಬರುತ್ತಿದ್ದೆ. ನಾನು ಕೆಲಸ ಮುಗಿಸಿ ಬರುವಾಗ ರಾತ್ರಿ 7.30 ಆಗಿತ್ತು. ನಾನು ನನ್ನ ಬೈಕ್ ನಲ್ಲಿ ಬಂದಿರುತ್ತೇನೆ. ನಾನು ಮನೆಗೆ ಬರುವಾಗ 8.00 ಗಂಟೆ ಆಗಿತ್ತು. ನಾನು ಬರುವಾಗ ಆರೋಪಿಗಳು 5 ಜನ ಸೇರಿ

ನನ್ನ ತಂದೆಗೆ ಹೊಡೆಯುತ್ತಿದ್ದರು. ನಾನು ಬರುವಾಗ ಚಾಸಾ-3 ರವರನ್ನು ಸಹ ಕರೆದುಕೊಂಡು ಬರುತ್ತಿದ್ದೆ . ನಾನು ಬೈಕ್ ನಲ್ಲಿ ಬರುತ್ತಿದ್ದೆ ಎಂದು ದೂರಿನಲ್ಲಿ ಬರೆಸಿದ್ದೀರಿ ಎಂದರೆ ಸಾಕ್ಷಿದಾರರು ಹೌದು ಎಂದು ನುಡಿಯುತ್ತಾರೆ. ನೀವು ಆ ರೀತಿ ಬರೆಸಿರುವುದಿಲ್ಲ , ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ನಾನು ಬರುವ ಮುಂಚೆ ಗಲಾಟೆ ಪ್ರಾರಂಭವಾಗಿ ಎಷ್ಟು ಗಂಟೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನೀವು ಬರುವಾವ ಬೀದಿ ದೀಪಗಳು ಇತ್ತಾ ಎಂದರೆ ಸಾಕ್ಷಿದಾರರು ಹೌದು ಎಂದು ನುಡಿಯುತ್ತಾರೆ. ನಿಮಗೂ ಮತ್ತು 1 ನೇ ಆರೋಪಿಯ ನಡುವೆ ಹಣಕಾಸಿನ ವ್ಯವಹಾರ ಇತ್ತಾ ಎನ್ನುವ ಸಂಬಂಧ ದಾಖಲೆ ಇತ್ತಾ ಎಂದರೆ ಹೌದು ಎಂದು ನುಡಿಯುತ್ತಾರೆ. 2 ರಿಂದ 4 ನೇ ಆರೋಪಿಗಳ ಮನೆಗೂ , ನಮ್ಮ ಮನೆಗೂ 200-300 ಮೀ ಅಂತರವಿದೆ. ಗಲಾಟೆ ಶಬ್ದ ಆರೋಪಿಗಳ ಮನೆಗೆ ಕೇಳಿಸುವುದಿಲ್ಲ ಎಂದರೆ ಸರಿ .

ನನ್ನ ಎಡಗೈ ಗೆ ದೊಣ್ಣೆಯಿಂದ ಏಟಾಗಿತ್ತು. ಯಾವ ಆರೋಪಿ ಯಾವ ಆಯುಧವನ್ನು ಹಿಡಿದುಕೊಂಡು ಬಂದಿದ್ದ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ದೊಣ್ಣೆಗಳು ಕಾಡುವ ಜಾತಿಯ ಕಕ್ಕೆ ದೊಣ್ಣೆಗಳು ಎಂದರೆ ಸರಿ . ನನಗೆ ಮತ್ತು ಶ್ರೀನಿವಾಸ್ ರವರಿಗೆ ಪೆಟ್ಟು ಬಿದ್ದಿರುತ್ತದೆ. ಏಟಾದ ನಂತರ ಆಸ್ಪತ್ರೆಗೆ 9.00 ರಿಂದ 10.00 ಗಂಟೆಗೆ ಚಿಕಿತ್ಸೆ ಗೆ ಹೋಗಿರುತ್ತೇನೆ. ಕೋಡಿಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರ 10 ಕಿಮಿ ಇದೆ. ಕನಕಪುರ ದ ಆಸ್ಪತ್ರೆಗೆ ಎಷ್ಟು ಗಂಟೆಗೆ ಬಂದಿರುತ್ತೇನೆ ಎಂದು ಗೊತ್ತಿಲ್ಲ. ನೀವು ಮತ್ತು ಚಾಸಾ-3 ರವರು ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದು ಒಳರೋಗಿಯಾಗಿ ಸೇರಿದ್ದೀರಿ ಎಂದರೆ

ಸರಿ . ನೀವು ಆಸ್ಪತ್ರೆಗೆ ಒಳರೋಗಿಯಾಗಿ ಸೇರಿದಾಗ ಪೋಲಿಸರು ಬಂದು ಹೇಳಿಕೆ ಪಡೆದಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಪೆಟ್ಟಾದ ಕಾರಣ ಬರೆಯಲು ಆಗುತ್ತಿರಲಿಲ್ಲ ಎಂದರೆ ಸರಿ . ನಿಮಗೆ ಎಡಗೈ ಪೆಟ್ಟಾದ ಕಾರಣ ಬಲಗೈ ಯಲ್ಲಿ ಬರೆಯಲು ತೊಂದರೆ ಇರಲಿಲ್ಲ ಎಂದರೆ ಸರಿ . ಪೋಲಿಸ್ ನವರ ಬಳಿಯೇ ದೂರನ್ನು ಬರೆಸಿರುತ್ತೇನೆ. ನಿಪಿ-1 ಎ ರಲ್ಲಿರುವ ಸಹಿ ಮತ್ತು ಬರವಣಿಗೆಗೂ ಯಾವುದೇ ವ್ಯತ್ಯಾಸ ಇಲ್ಲ ಎಂದರೆ ಸರಿಯಲ್ಲ. ನೀವು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುವುದರಿಂದ , ಬಲಗೈ ಚೆನ್ನಾಗಿದ್ದು ಬರೆಯಲು ತೊಂದರೆ ಇರಲಿಲ್ಲ ಎಂದರೆ ನಾನು ದೂರನ್ನು ಯಾವತ್ತೂ ಬರೆದಿಲ್ಲ ಎಂದು ನುಡಿಯುತ್ತಾರೆ.

ದೂರನ್ನು ಬರೆಸಿದಾಗ ಮಧ್ಯಾಹ್ನ 12.30 ಆಗಿತ್ತು. ಘಟನೆ 20.01.2020 ರಂದು ನಡೆದಿತ್ತು . 20 ನೇ ದಿನಾಂಕದಂದೇ ದೂರನ್ನು ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರರು ಗಲಾಟೆಯಾದ ಕಾರಣ ಮನೆಯಲ್ಲಿಯೇ ಇದ್ದೆ ಎಂದು ನುಡಿಯುತ್ತಾರೆ. ನೀವು ತಡವಾಗಿ ದೂರನ್ನು ನೀಡಿರುವ ಕಾರಣ , ಈ ಹಿಂದೆ ನೀವು ಆರೋಪಿಗಳಿಗೆ ಹೊಡೆದಿರುವ ಕಾರಣ ತಡವಾಗಿ ದೂರು ನೀಡಿರುತ್ತೀರಿ ಎಂದರೆ ಸರಿಯಲ್ಲ. ಒಳರೋಗಿಯಾದ ಚಿಕಿತ್ಸೆ ಪಡೆದಿರುವ ಬಗ್ಗೆ ಯಾವುದಾದರೂ ದಾಖಲಾತಿಯನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಿ ಎಂದರೆ ಗೊತ್ತಿಲ್ಲ. ನಾನು ಆಸ್ಪತ್ರೆ ಯಿಂದ ದಿನಾಂಕ 21.01.2021 ರಂದು Discharge ಆಗಿರುತ್ತೇನೆ. Discharge ಸಮ್ಮರಿ ನೀಡಿರುವುದಿಲ್ಲ. ನಾನು Discharge ಆದ ಬಳಿಕ ದೂರನ್ನು ಪೋಲಿಸರಿಗೆ ನೀಡಿರುತ್ತೇನೆ ಎಂದು ಹೇಳಿ ಕಟ್ಟು ಕತೆ ಹೇಳುತ್ತಿದ್ದೇ಼ನೆ ಎಂದರೆ ಸರಿಯಲ್ಲ.

ಆರೋಪಿಗಳು ನೀಡಿರುವ ದೂರಿನ ಮೇಲೆ ನೀವು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದಿರುತ್ತೀರಿ ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋಗಿ ದೂರಿನ ಬಗ್ಗೆ ಮಾಹಿತಿಯನ್ನು ನೀಡಿರುತ್ತೇನೆ. ಪೊಲಿಸರು ದೂರನ್ನು ಬರೆದಿರುವ ಮಾಹಿತಿಯ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಗಲಾಟೆ ಸಮಯದಲ್ಲಿ ಊರಿನವರು ಇದ್ದರು ಎಂದರೆ ಸರಿ . ಗಲಾಟೆ ಸಮಯದಲ್ಲಿ ಅಕ್ಕ ಪಕ್ಕ 10 ಜನ ಇದ್ದರು. ನನ್ನನ್ನು ಆಸ್ಪತ್ರೆಗೆ ಅಪ್ಪ ಅಮ್ಮ ಸೇರಿಸಿದ್ದರು. ನಾನು ಆಸ್ಪತ್ರೆಗೆ ಆಟೋದಲ್ಲಿ ಹೋಗಿರುತ್ತೇನೆ. ಯಾರು ಆಟೋ ಕರೆಸಿರುತ್ತಾರೆ ಎಂ ದು ನೆನಪಿಲ್ಲ. ಈ ಹಿಂದೆ ನೀವು ಮಾಡಿದಂತಹ ಅಪರಾಧವನು ಮುಚ್ಚಿ ಹಾಕಲು ಈ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಿಮಗೆ ರಕ್ತ ಗಾಯವಾಗಿರಲಿಲ್ಲ ಎಂದರೆ ಸರಿ . ವೈದ್ಯರ ಬಳಿ ಎಡಗೈಗೆ ನೋವಾಗಿರುವ ಬಗ್ಗೆ ಹೇಳಿರುತ್ತೀರಿ ಎಂದರೆ ಸರಿ . ವೈದ್ಯರನ್ನು ರಾತ್ರಿ 9.30 ಗೆ ಭೇಟಿಯಾಗಿರುತ್ತೇನೆ. ಪೋಲಿಸರು ದೂರು ಬರೆದ ನಂತರ ಪೋಲಿಸರು ನಿಮ್ಮ ಬಳಿ ಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ಸರಿ . ಯಾವ ದಿನಾಂಕದಂದು ಹೇಳಿಕೆ ಪಡೆದಿರುತ್ತಾರೆ ಎಂದರೆ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ಪೋಲಿಸ್ ನವರು ಹೇಳಿಕೆ ಪಡೆಯಲು ನೋಟಿಸ್ ನೀಡಿರುತ್ತಾರಾ ಎಂದರೆ ನೆನಪಿಲ್ಲ. ಯಾವ Rank ಪೋಲಿಸ್ ರ ಮುಂದೆ ಹೇಳಿಕೆ ಪಡೆದಿರುತ್ತೀರಾ ಎಂದರೆ ಗೊತ್ತಿಲ್ಲ. ಹೇಳಿಕೆ ಕೊಡುವ ಸಮಯದಲ್ಲಿ ನಮ್ಮ ಅಪ್ಪ , ಅಮ್ಮ ಇದ್ದರು. ಆರೋಪಿಗಳು ಬೈದಿರುವ ವಿಚಾರವನ್ನು ಯಾರು ಕೇಳಿಸಿಕೊಂಡರು ಎಂದರೆ ನಾನು , ನನ್ನ ಅಪ್ಪ , ಅಮ್ಮ ಕೇಳಿಸಿಕೊಂಡಿರುವುದಾಗಿ ನುಡಿಯುತ್ತಾರೆ.

ಗ್ರಾಮಸ್ಥರನ್ನು ಪೋಲಿಸ್ ರು ಠಾಣೆಗೆ ಕರೆಸಿರುತ್ತಾರೆ. ನಾಗೇಶ್ ಮತ್ತು ಗುರುವಯ್ಯ ಎಂದು ನುಡಿಯುತ್ತಾರೆ.

ನೀವು ಟಾರ್ ರಸ್ತೆಯ ಮೇಲೆ ಗಾಡಿಯಲ್ಲಿ ಬರುವಾಗ ಬಿದ್ದು ಗಾಯ ಪಡಿಸಿಕೊಂಡು ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಮಹಜರ್ ಮಾಡುವಾಗ ನೀವು ಇದ್ದೀರಾ ಎಂದರೆ ಇರಲಿಲ್ಲ . ಆರೋಪಿಗಳು ಯಾವುದೇ ರೀತಿಯಲ್ಲಿ ಹೊಡೆದಿರುವುದಿಲ್ಲ , ನೀವು ಅವರ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ